ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

ಸಾಕ್ಷಿಗೆ ದಿನಾಂಕಃ **11-10-2022** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.49/2021
CW- 1 PW- 1

| | | |
|---|---|---|
| ಸಾಕ್ಷಿದಾರರ ಹೆಸರು | - | ಶೀತಲ್ ಯುವರಾಜ್ ಪೋಳ್ |
| ವಯಸ್ಸು | - | 44 ವರ್ಷ |
| ಉದ್ಯೋಗ | - | ಶಾಖಾ ಪ್ರಬಂಧಕರು (ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆಃ ವಿಜಯಪುರ) |
| ಸಾಕೀನ | - | ವಿಜಯಪುರ |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಮೇ 2018 ರಿಂದ ಜುಲೈ 2021 ರ ವರೆಗೆ ಗೋಕಾಕಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಶಾಖಾ ಪ್ರಬಂಧಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-2 ರಿಂದ 4 ರವರ ಪರಿಚಯ ಇದೆ. ನಮ್ಮ ಬ್ಯಾಂಕಿನಿಂದ ಗ್ರಾಹಕರಿಗೆ ಸಾಲ ಸೌಲಭ್ಯವನ್ನು ಸಹ ಒದಗಿಸಿಕೊಡುತ್ತೇವೆ. ನಾವು ಗ್ರಾಹಕರಿಗೆ ಸಾಲ ನೀಡುವ ಸಮಯದಲ್ಲಿ ದಾಖಲಾತಿಗಳನ್ನು ಮಾಡಿಕೊಂಡು ಸಾಲ ನೀಡುತ್ತೇವೆ. ರೈತರಿಗೆ ಸಾಲ ನೀಡಬೇಕಾದರೆ ಅವರ ಜಮೀನುಗಳನ್ನು ಅಡಮಾನವಿಟ್ಟುಕೊಂಡು ನಮ್ಮ ಬ್ಯಾಂಕಿನ ನಿಬಂಧನೆಗಳ ಪ್ರಕಾರ ಸಾಲ ಮಂಜೂರು ಮಾಡುತ್ತೇವೆ. ಅಡಮಾನ ಮಾಡಿಕೊಳ್ಳುವ ಸಮಯದಲ್ಲಿ ನಾವು ನೊಂದಣಾಧಿಕಾರಿಗಳ ಕಚೇರಿಗೆ ಹೋಗಲು ವಿನಾಯಿತಿ ಇರುತ್ತದೆ. ನಾವು ಬ್ಯಾಂಕಿನ ಮೊಹರು ಮತ್ತು ಸಹಿ ಮಾಡಿ ನೊಂದಣಿಯಾಗುವ ದಾಖಲೆಯನ್ನು ಗ್ರಾಹಕರಿಗೆ ನೀಡುತ್ತೇವೆ. ಗ್ರಾಹಕರು ನೊಂದಣಿ ಮಾಡಿಕೊಂಡು ನಮ್ಮ ಬಳಿ ಬಂದು ದಾಖಲೆಗಳನ್ನು ನೀಡುತ್ತಾರೆ.

ನಮ್ಮ ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾದ ಆರೋಪಿ ನಂ.1 ರವರು ಬೆಳೆ ಸಾಲ ಎಂದು ರೂ.2,50,000/- ಹಾಗೂ ಚಿಕ್ಕ ನೀರಾವರಿ ಸಾಲ ಎಂದು ರೂ.5,00,000/- ಪಡೆದುಕೊಂಡಿದ್ದರು. ಸಾಲ ಪಡೆಯುವಾಗ ಆರೋಪಿ ನಂ.1 ರವರು ತಮ್ಮ ಜಮೀನನ್ನು ನಮ್ಮ ಬ್ಯಾಂಕಿಗೆ ಅಡಮಾನವಿಟ್ಟು ಸಾಲ ಪಡೆದುಕೊಂಡಿರುತ್ತಾರೆ. ಆರೋಪಿತಳು ನಮ್ಮ ಬ್ಯಾಂಕಿನಿಂದ ಪಡೆದ ಸಾಲವನ್ನು ಮರಳಿ ನೀಡಿರಲಿಲ್ಲ. ಆರೋಪಿ ನಂ.1 ರವರು ರೀ ಕನ್ವಿಯನ್ಸ ಮಾಟಗೇಜ್ ಡೀಡನ್ನು ಸೃಷ್ಟಿಮಾಡಿಕೊಂಡಿರುತ್ತಾಳೆ. ಸದರಿ ದಾಖಲೆಯಲ್ಲಿ ನಮ್ಮ ಬ್ಯಾಂಕಿನಲ್ಲಿ ಯಾವುದೇ ಸಾಲ ಬಾಕಿ ಉಳಿದಿರುವುದಿಲ್ಲ ಎಂದು ಸೃಷ್ಟಿಮಾಡಿಕೊಂಡಿರುತ್ತಾಳೆ. ಆರೋಪಿತಳು ನಮ್ಮ ಬ್ಯಾಂಕಿನಿಂದ ಪಡೆದ ಸಾಲವನ್ನು ಮರು ಸಂದಾಯ ಮಾಡಿರುವುದಿಲ್ಲ ಹೀಗಾಗಿ ನೊಂದಾಯಿತ ಮಾಟಗೇಜ್ ರದ್ದು ಪಡಿಸಲು ನಮ್ಮ ಬ್ಯಾಂಕಿನಿಂದ ಆರೋಪಿತಳಿಗೆ ಯಾವುದೇ ದಾಖಲೆಯನ್ನು ನಾವು ನೀಡಿರುವುದಿಲ್ಲ.

ಚಾಸಾ-3 ರವರು ನಮ್ಮ ಬ್ಯಾಂಕಿನಿಂದ 2016 ರಲ್ಲಿ ವರ್ಗಾವಣೆಯಾಗಿರುತ್ತಾರೆ. ನಂತರ ಚಾಸಾ-4 ರವರು ಅಧಿಕಾರ ವಹಿಸಿಕೊಂಡಿದ್ದರು. ಚಾಸಾ-4 ರವರಿಗೆ ವರ್ಗಾವಣೆಯಾದ ನಂತರ ನಾನು ಶಾಖಾ ಪ್ರಬಂಧಕರಾಗಿ ಅಧಿಕಾರ ವಹಿಸಿಕೊಂಡಿರುತ್ತೇನೆ. ಆರೋಪಿತಳು ಸಾಲ ಪಡೆಯುವುದಕ್ಕಾಗಿ ಎಸ್ ಬಿ ಐ ಮಹಾಲಿಂಗಪುರ ಶಾಖೆಗೆ ಭೇಟಿ ನೀಡಿದ್ದು ಸದರಿ ಶಾಖೆಯವರು ಚಾಸಾ-2 ರವರಿಗೆ ಕರೆ ಮಾಡಿ ಆರೋಪಿತಳ ಸಾಲದ ಬಗ್ಗೆ ವಿಚಾರ ಮಾಡಿದ್ದರು. ನಾವು ಆರೋಪಿ ನಂ.1 ರವರ ಖಾತೆಯ ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ ಆರೋಪಿತಳು ನಮ್ಮ ಶಾಖೆಯಿಂದ ಪಡೆದ ಸಾಲ ಮರುಸಂದಾಯ ಮಾಡದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಮರು ಸಂದಾಯ ಮಾಡಿರುವ ಕುರಿತು ರೀ ಕನ್ವೀಯನ್ಸ ಡೀಡ್ ಮಾಡಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿತ್ತು. ಸದರಿ ರೀ ಕನ್ವೀಯನ್ಸ ಡೀಡನ್ನು ಪರಿಶೀಲನೆ ಮಾಡಲಾಗಿ ನಮ್ಮ ಬ್ಯಾಂಕಿನ ಚಾಸಾ-3 ರವರ ಸಹಿಯನ್ನು ಹೋಲುವಂತೆ ಆರೋಪಿತರು ಸಹಿ ಮಾಡಿ ಸದರಿ ದಾಖಲೆ ಸೃಷ್ಟಿ ಮಾಡಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿತ್ತು.

ಆರೋಪಿತಳು ನಮ್ಮಿಂದ ಸಾಲ ಪಡೆಯುವಾಗ ಎರಡು ಜಮೀನುಗಳ ಕುರಿತು ಮಾಟಗೇಜ ಮಾಡಿದ್ದು ಸದರಿ ಜಮೀನುಗಳ ಋಣಭಾರಗಳ ದಾಖಲೆಗಳನ್ನು ತೆಗೆಯಿಸಿ ನೋಡಲಾಗಿ ಒಂದು ಜಮೀನನ್ನು ಮಾರಾಟ ಮಾಡಿರುವುದು ನಮ್ಮ ಗಮನಕ್ಕೆ ಬಂದಿತ್ತು. ನಮ್ಮ ಬ್ಯಾಂಕಿನಿಂದ ಪಡೆದ ಸಾಲವನ್ನು ಮರುಪಾವತಿ ಮಾಡದೇ ಆರೋಪಿತರು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿತ್ತು.

ಈ ಕುರಿತು ನಮ್ಮ ಮೇಲಾಧಿಕಾರಿಗಳಿಗೆ ಆರೋಪಿತರು ನಮ್ಮ ಬ್ಯಾಂಕ್ ಶಾಖೆಗೆ ನಂಬಿಕೆ ದ್ರೋಹ, ಮೋಸ ಮತ್ತು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರವ ಬಗ್ಗೆ ತಿಳಿಸಿರುತ್ತೇನೆ. ನಮ್ಮ ಮೇಲಾಧಿಕಾರಿಗಳು ಆರೋಪಿತರ ವಿರುದ್ಧ ದೂರು ಸಲ್ಲಿಸಲು ತಿಳಿಸಿದ ಮೇರೆಗೆ ನಾನು ಆರೋಪಿತರ ವಿರುದ್ಧ 2018 ನೇ ಸಾಲಿನಲ್ಲಿ ದೂರು ನೀಡಿರುತ್ತೇನೆ. ನಾನೀನ ಸದರಿ ದೂರನ್ನು ನೋಡುತಿದ್ದು ಅದರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಹೀಗಾಗಿ ಸದರಿ ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1-ಎ ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸ.ಸ.ಅ ರವರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.